ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೆ, ಅವರು ಆ ದಿನ ಜನರಲ್‌ಬಾಡಿ ಮೀಟಿಂಗ್‌ನಲ್ಲಿ ಈ ಉತ್ತರ ಕೊಟ್ಟಿಲ್ಲವೆಂದರೆ ನಾನು ಮತ್ತೆ ಈ ಸದನದಲ್ಲಿ ಈ ವಿಷಯದಲ್ಲಿ ಪ್ರಶ್ನೆ ಕೇಳುವುದಿಲ್ಲ. ಅದೇ ಸೆಕ್ರಟರಿ ನಿಂತುಕೊಂಡು ಜನರಲ್‌ಬಾಡಿ ಮೀಟಿಂಗ್ ನಲ್ಲಿ ನಮಗೆ ಈ ಉತ್ತರ ಕೊಟ್ಟರು. ಅದೇ ಬ್ಯಾಂಕಿನ ಅಧ್ಯಕ್ಷರು ಜನರಲ್ ಬಾಡಿ ಮೀಟಿಂಗ್‌ನಲ್ಲಿ ನಿಂತುಕೊಂಡು ಚಿಕ್ಕನಾಯಕನಹಳ್ಳಿ ಪಿ.ಎಲ್.ಡಿ. ಬ್ಯಾಂಕಿನಲ್ಲಿ ಈ ಮಾತು ಹೇಳಿದರು. ನಾನು ಆ ಕ್ಷೇತ್ರದ ಶಾಸಕ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಕುಳಿತಿದ್ದವನು. ನಾನು ಇಲ್ಲಿ ಈ ಪ್ರಶ್ನೆ ಕೇಳಿದಾಗ ಈ ರೀತಿಯ ಉತ್ತರ ಕಳುಹಿಸುತ್ತಾರೆಂದರೆ ಹೇಗೆ. ಸರ್ಕಾರದ ಬಗ್ಗೆ ಗೌರವವನ್ನು ಬ್ಯಾಂಕ್ ಸ್ಟ್ಯಾಫ್ ಎಷ್ಟು ಇಟ್ಟುಕೊಂಡಿದ್ದಾರೆಂದು ತಾವು ಯೋಚನೆ ಮಾಡಿ. ನಾನೇ ಪ್ರಶ್ನೆ ಕೇಳಿದ್ದೇನೆಂದು ಅವರಿಗೆ ಗೊತ್ತಾಗಬೇಕಾಗಿತ್ತು. ನಾನು ಆ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಹಾಜರಿದ್ದೇನೆ. ಆಡಿಟ್ ರಿಪೋರ್ಟ್ ಮೇಲೆ ತಕರಾರು ತೆಗೆದುಕೊಂಡಿದ್ದೇನೆ. ಯಾರು ಈ ಬೇಜವಾಬ್ದಾರಿಗೆ ಕಾರಣ ಎಂಬುದನ್ನು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ನಾಳೆಯೇ ನಾನು ಒಬ್ಬ ಸ್ಪೆಷಲ್ ಆಫೀಸರ್‌ನ್ನು ಕಳುಹಿಸಿ ಅದನ್ನು ವೆರಿಫೈ ಮಾಡಿಸಿ, ನಿಶ್ಚಿತವಾಗಿ ಅವರ ಮೇಲೆ ಕಾಯ್ದೆ ಪ್ರಕಾರ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ.

ಬೈಲಹೊಂಗಲದಲ್ಲಿ ಹೊಸ ಬಸ್ ಮಾರ್ಗಗಳು.

335(2204) ಶ್ರೀ ಕೌಜಲಗಿ ಮಹಂತೇಸ್ ಶಿವಾನಂದ, (ಬೈಲಹೊಂಗಲ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಲಹೊಂಗಲ ಘಟಕದಿಂದ 1) ಬೈಲಹೊಂಗಲ ಹಿರೇಬ್ಯುನೂರು2) ಬೈಲಹೊಂಗಲ ಚಚಡಿ (ವಾಯಾ ತೆನಿಕೊಳ್ಳ) 3) ಬೈಲಹೊಂಗಲ ಹೊಳಿನಾಗಲಾಪುರ (ವಾಯಾ ಕಂಗನೂರ, ಸಂಗೋಳ್ಳಿ ಗುಡದೂರ) 4) ಬೈಲಹೊಂಗಲ ಚಚಡಿ ಉಪ್ಪಿನ ಬಟ್ಟಗೇರಿ ಈ ಸ್ಥಳಗಳಿಗೆ ಹೊಸ ಬಸ್ ಸಂಚಾರಗಳನ್ನು ಪ್ರಾರಂಭಿಸಬೇಕೆಂಬ ಸಾರ್ವಜನಿಕರ ಬೇಡಿಕೆಯು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಈ ಹೊಸ ಬಸ್ ಸಂಚಾರವನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಬಂದಿದೆ.

ಅ) ಬೈಲಹೊಂಗಲ ಗೋಕಾಕ್ ಹಾಗೂ ಹಲಿಯಾಳದಿಂದ ಹೀರಬ್ಬನೂರು ಮಾರ್ಗವಾಗಿ ಈಗಾಗಲೇ 9 ಸಾರಿಗೆಗಳನ್ನು ಒದಗಿಸಲಾಗಿದೆ.

ಬೈಲಹೊಂಗಲದಿಂದ ಚಚಡಿ ಗ್ರಾಮಕ್ಕೆ 7 ಸಾರಿಗೆ ಬಸ್ ಒದಗಿಸಲಾಗಿದೆ. ತೆನಿಕೊಳ್ಳವು ಚಚಡಿಯಿಂದ 2 ಕಿ.ಮೀ. ದೂರದಲ್ಲಿ ಇದ್ದು ತನಿಕೊಳ್ಳದಲ್ಲಿ ಒಂದು ದೇವಸ್ಥಾನವಿದೆ ಅಲ್ಲಿ ಜನವಸತಿ ಇಲ್ಲ, ಆದುದರಿಂದ ಚಚಡಿ ಬಸ್ಸುಗಳನ್ನು ವಾಯಾ ತೆನಿಕೊಳ್ಳ ಮಾರ್ಗವಾಗಿ ಓಡಿಸುವುದು ಸಮಂಜಸವಾಗಲಾರದು.

ಬೈಲಹೊಂಗಲ ಹೊಳನಾಗಲಾಪುರ ಕಂಗನೂರು ಸಂಗೋಳ್ಳಿ ಗುಡಿನೂರು ಮಾರ್ಗವಾಗಿ 4 ಸಾರಿಗೆಗಳನ್ನು ಒದಗಿಸಲಾಗಿದೆ.

ಬೈಲಹೊಂಗಲದಿಂದ ಉಪ್ಪಿನ ಬೆಟ್ಟಗೇರಿಗೆ 18 ಸಾರಿಗೆಗಳನ್ನು ಒದಗಿಸಲಾಗಿದೆ. ಬೈಲಹೊಂಗಲ ಹೊಳನಾಗಲಾಪುರ ವಾಯಾ ತಂಗನೂರು ಸಂಗೊಳ್ಳಿ ಗುಡ್ಡನೂರು ಮಾರ್ಗವಾಗಿ ಓಡಿಸಿದರೆ ನೇರ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ. ಆದುದರಿಂದ ಬೈಲಹೊಂಗಲ ಗುಡದೂರು ಪ್ರತ್ಯೇಕ 4 ಸಾರಿಗೆಗಳನ್ನು ಒದಗಿಸಲಾಗಿದೆ.

ಪ್ರಯಾಣಿಕರ ದಟ್ಟಣೆಗೆ ಅನುಸರಿಸಿ ಹೆಚ್ಚಿನ ಸಾರಿಗೆ ಬಸ್ಸುಗಳನ್ನು ಓಡಿಸಲು ಕ್ರಮ ಕೈಕೊಳ್ಳಲಾಗುವುದು.

ಶ್ರೀ ಕೌಜಲಗಿ ಮಹಂತೇಶ ಶಿವಾನಂದ :— ಮಾನ್ಯ ಅಧ್ಯಕ್ಷರೇ, ಕಳೆದ ಎರಡು ವರ್ಷಗಳಿಂದ ಈ ಹೊಸ ಬಸ್ಸು ಸಂಚಾರವನ್ನು ಪ್ರಾರಂಭಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಈ ಭಾಗದಲ್ಲಿ ಬಸ್ಸಿನ ಸೌಕರ್ಯ ಹೆಚ್ಚು ಇಲ್ಲದೆ ಇರುವುದರಿಂದ ಅಲ್ಲಿಯ ಪ್ರಯಾಣಿಕರು ಪ್ರತಿನಿತ್ಯ ಬಸ್ಸಿನ ಮೇಲೆ ಹತ್ತಿ ಪ್ರಯಾಣ ಮಾಡುವುದು ಸರ್ವೇ ಸಾಮಾನ್ಯವಾಗಿದೆ. ಅದಕ್ಕೆ ನಾನು ಬೈಲಹೊಂಗಲ ಘಟಕದಿಂದ ಹಿರೇಬುದ್ದನೂರುಗೆ ಒಂದು ಹೊಸ ಬಸ್ಸಿನ ಮಾರ್ಗವನ್ನು ಪ್ರಾರಂಬಿಸಬೇಕೆಂದು ಕೇಳಿದರೆ ಬೈಲಹೊಂಗಲ್, ಗೋಕಾಕ್ ಹಾಗೂ ಹಳಿಯಾಳ ಮಾರ್ಗದಿಂದ ಹಿರೇಬುದ್ದನೂರು ಮಾರ್ಗವಾಗಿ ಈಗಾಗಲೇ 9 ಸಾರಿಗೆಗಳನ್ನು ಒದಗಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇವೆಲ್ಲಾ ಎಕ್ಸ್‌ಪ್ರೆಸ್ ಬಸ್ಸುಗಳು ಇರುವುದರಿಂದ ಈ ಹಿರೇಬುದ್ದನೂರು ಗ್ರಾಮ ಹಾಗೂ ಸುತ್ತಮುತ್ತಲಿನ ಇರುವ ಗ್ರಾಮಗಳಿಗೆ ಹೋಗುವ ಜನರಿಗೆ ಈ ಬಸ್ಸಿನಲ್ಲಿ ಪ್ರಯಾಣ ಮಾಡುವುದು ಬಹಳ ಕಷ್ಟವಾಗಿದೆ. ಬೈಲಹೊಂಗಲಕ್ಕೆ ಬರಬೇಕೆಂದರೆ, ಸುಮಾರು ಎರಡು ಕಿಲೋಮೀಟರ್ ನಡೆದು ಹಿರೇಬುದ್ದನೂರ್ ವಾಯಾ ಮಳಗಲಿ, ಚಿಕ್ಕಬುದ್ದನೂರು ಈ ಮಾರ್ಗವಾಗಿ ಒಂದು ಹೊಸ ಬಸ್ಸನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಇನ್ನು ಎರಡನೆಯದಾಗಿ ಬೈಲಹೊಂಗಲ್ ತೆನಿಕೊಳ್ಳಕ್ಕೆ ಒಂದು ಬಸ್ಸು ಪ್ರಾರಂಭ ಮಾಡಬೇಕಾಗಿದೆ. ಇದು ಒಂದು ಅತ್ಯಂತ ಪುಣ್ಯಕ್ಷೇತ್ರವಾಗಿದ್ದು, ಇಲ್ಲಿಗೆ ಭಕ್ತರು

ಹೋಗಬೇಕಾದರೆ ಚಚಡಿಯಿಂದ ಎರಡು ಕಿಲೋಮೀಟರ್ ಅಥವಾ ಮುರಗೋಡ್‌ನಿಂದ ಮೂರು ಕಿಲೋಮೀಟರ್ ಪ್ರಯಾಣ ಮಾಡಬೇಕಾಗುತ್ತದೆ. ಅದಕ್ಕೆ ಈ ಹೊಸ ರೂಟ್‌ಗಳನ್ನು ಬೇಗ ಪ್ರಾರಂಭಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ :-- ಮಾನ್ಯ ಅಧ್ಯಕ್ಷರೇ, ಬೈಲಹೊಂಗಲ ಘಟಕದಿಂದ ಸುಮಾರು 42 ಸಾರಿಗೆಗಳನ್ನು ಒದಗಿಸಲಾಗಿದೆ. ಮಾನ್ಯ ಶಾಸಕರು ಕೇಳಿರುವ ರೀತಿ, ಬೈಲಹೊಂಗಲ, ಮತ್ತು ಬೈಲಹೊಂಗಲದಿಂದ ಚಚಡಿ ಮಾರ್ಗ, ಬೈಲಹೊಂಗಲ, ಹೊಳೆ-ನಾಗಲಾಪುರ, ಕಂಗನೂರು, ಬೈಲಹೊಂಗಲ ಚಚಡಿ ಉಪ್ಪಿನ ಬೆಟ್ಟಗೇರಿ ಈ ತರಹ ಎಲ್ಲಾ ಸ್ಥಳಗಳಿಗೆ ಹೋಗುತ್ತಿದೆ. ಇನ್ನೂ ಹೆಚ್ಚು ಬೇಡಿಕೆ ಇದೆ. ಮಾನ್ಯ ಸದಸ್ಯರು ಕೇಳುತ್ತಾ ಇರತಕ್ಕಂಥಾದ್ದು, ಚಚಡಿ ಗ್ರಾಮದಿಂದ ಸುಮಾರು ಎರಡು ಕಿಲೋಮೀಟರ್ ದೂರದಲ್ಲಿ ಇರತಕ್ಕ ಒಂದು ಪುಣ್ಯ ಕ್ಷೇತ್ರ ತೆನಿಕೊಳ್ಳಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿ ಒಂದು ದೇವಸ್ಥಾನ ಇದೆ. ಅಲ್ಲಿ ಜನ ಯಾರೂ ವಾಸ ಮಾಡುತ್ತಿಲ್ಲ. ಬರೀ ದೇವಸ್ಥಾನಕ್ಕೆ ಹೋಗಿ ಬರುವಂಥಾದ್ದು ರೆವಿನ್ಯೂ ದೃಷ್ಟಿಯಿಂದ ಸಮಂಜಸ ಅಲ್ಲವೆಂದು ಹೇಳಿ ಆ ಮಾರ್ಗವನ್ನು ವಿಸ್ತರಣೆ ಮಾಡಿಲ್ಲ. ಈಗ ಶಾಸಕರು ಯಾವ ಮಾರ್ಗ ಕೇಳುತ್ತಾರೋ ಅದನ್ನು ಮಾಡಿಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಅವರು ಯಾವುದೋ ಬೇರೆ ಬೇರೆ ಮಾರ್ಗಗಳನ್ನು ಕೇಳಿದ್ದಾರೆ ಸ್ಥಳೀಯವಾಗಿ ಅಲ್ಲಿ ಓಡಾಟಕ್ಕೆ ಬೇಕಾದಂಥಾದ್ದು ಎಂದು ಹೇಳಿದ್ದಾರೆ. ಅವರು ಪ್ರತ್ಯೇಕವಾಗಿ ಬಂದು ಮಾರ್ಗಗಳು ಯಾವ್ಯಾವುದು ಬೇಕು ಎಂದು ಕೊಡಲಿ, ಅದನ್ನು ಕಾರ್ಯಗತ ಮಾಡಿಕೊಡುತ್ತೇನೆ.

ಕೆ.ಎಸ್.ಆರ್.ಟಿ.ಸಿ.ಯಲ್ಲಿ ಹಿರಿಯರಿಗೆ ಸೌಕರ್ಯ.

337 (2169) ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂತರರಾಷ್ಟ್ರೀಯ ವೃದ್ಧರ ವರ್ಷದ ಸಂದರ್ಭದಲ್ಲಿ ರಾಜ್ಯದ 60 ವರ್ಷ ದಾಟಿದ ಹಿರಿಯರಿಗೆ ಕರ್ನಾಟಕ ರಸ್ತೆ ಸಾರಿಗೆಯಲ್ಲಿ ಅರ್ಧ ದರದಲ್ಲಿ ಪ್ರಯಾಣಿಸಲು ಅವಕಾಶ ಮಾಡುವ ಉದ್ದೇಶ ಏನಾದರೂ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಹಿರಿಯ ನಾಗರೀಕರೆಂದು ಗೌರವಿಸಲು ಈ ಯೋಜನೆಯಿಂದ ಸರ್ಕಾರಕ್ಕೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಇಲ್ಲಾ

ಆ) ಉದ್ಭವಿಸುವುದಿಲ್ಲ.